
# ಹೋರಾಟದ ಹಾದಿ...



## ಲಿಂಗಾಯತ

### “ಸ್ವತಂತ್ರ ಧರ್ಮ” ಹೋರಾಟದ ಇತಿಹಾಸ

ದೆಹಲಿ, 2007







ಬೀದರ, 2017

ಬೆಳಗಾವಿ, 2017






ವಿಜಯಪುರ, 2017



# ಲಿಂಗಾಯತ ಸ್ವತಂತ್ರ ಧರ್ಮ ಹೋರಾಟದ ಇತಿಹಾಸ

೧೨ ನೇ ಶತಮಾನದಲ್ಲಿ ಗುರು ಬಸವಣ್ಣನವರು ಹಾಗೂ ಇತರ ಶರಣರು ಸೇರಿ ಅಪೂರ್ವ ಕ್ರಾಂತಿಯನ್ನು ಮಾಡಿದರು. ಗಂಡು-ಹೆಣ್ಣು ಎಂಬ ಲಿಂಗಭೇದ, ಬಡವ-ಶ್ರಿಮಂತ ಎಂಬ ವರ್ಗಭೇದ, ಸಂಸಾರಿ-ಸನ್ಯಾಸಿ ಎಂಬ ಆಶ್ರಮಭೇದ, ವರ್ಣಪದ್ಧತಿಯ ಶ್ರೇಣಿಕೃತ ವ್ಯವಸ್ಥೆ ಹಾಗೂ  ಜಾತಿ ಪದ್ಧತಿಯ ಅಸಮಾನತೆಯ ವಿರುದ್ಧ ಹೋರಾಡಿ ಸಮಾನತೆಯ ತಳಹದಿಯ ಮೇಲೆ ಲಿಂಗಾಯತ ಧರ್ಮ ಸ್ಥಾಪಿಸಿದರು. ಬಸವಣ್ಣನವರು ತಮ್ಮ ಸ್ವಂತ ವೈಚಾರಿಕ ಆಲೋಚನೆಗಳಿಂದ ಲಿಂಗಾಯತ ಧರ್ಮಕ್ಕೆ ನಾಂದಿ ಹಾಡಿದರು

**ಎನಗೆ ಗುರುಪಥವ ತೋರಿದವರಾರು?**
**ಲಿಂಗಪಥವ ತೋರಿದವರಾರು?**
**ಜಂಗಮಪಥವ ತೋರಿದವರಾರು?**
**ಪಾದೋದಕ ಪ್ರಸಾದಪಥವ ತೋರಿದವರಾರು?**
**ತೋರುವ ಮನವೆ ನೀವೆಂದರಿತೆ**

ಎಂದು ಗುರುಬಸವಣ್ಣನವರು ದೇವರನ್ನು ಸಂಭೋಧಿಸುತ್ತಾರೆ. ಒಂದು ವೇಳೆ ಬಸವಣ್ಣನವರಿಗೆ ಯಾರಾದರು ಈ ಧರ್ಮ ಕೊಟ್ಟಿದ್ದರೆ ಅವರ ಹೆಸರನ್ನು ಇಲ್ಲಿ ಬಳಸಬಹುದಾಗಿತ್ತು. ಏಸು ಕ್ರಿಸ್ತ, ಮೊಹಮ್ಮದ ಪೈಗಂಬರ್, ಬುದ್ಧ, ಗುರು ನಾನಕ್, ಮಹಾವೀರರು ತಾವು ಧರ್ಮ ಸ್ಥಾಪಿಸಿದ್ದೇವೆ ಎಂದು ಹೇಳಲಿಲ್ಲ ಆದರೆ ಅವರ ಅನುಯಾಯಿಗಳು ಅದನ್ನು ಧರ್ಮವನ್ನಾಗಿ ಕರೆದರು. ಧರ್ಮಗುರು ಬರೆದ ಅಥವಾ ಹೇಳಿದ ತತ್ವಗಳನ್ನು ಧರ್ಮದ ಚೌಕಟ್ಟಿನಲ್ಲಿ ಪ್ರಚಾರ ಮಾಡುತ್ತ ಬಂದರು. ಅದೇ ರೀತಿ ಬಸವಣ್ಣನವರ ಸಮಕಾಲೀನ ಹಾಗೂ ನಂತರದ ಅನುಯಾಯಿಗಳಾದ ಶರಣರು ತಮ್ಮ ವಚನಗಳಲ್ಲಿ ಬಸವಣ್ಣನವರೆ ಲಿಂಗಾಯತ ಧರ್ಮಗುರು ಎಂಬ ಮಾತನ್ನು ಸ್ಪಷ್ಟಪಡಿಸುತ್ತಾರೆ. ಬಸವಣ್ಣನವರು ಕಟ್ಟಿದ್ದು ಸ್ವತಂತ್ರ ಧರ್ಮವೇ ಹೊರತು ಜಾತಿಯಲ್ಲ ಎಂದು ವಚನಗಳಿಂದ ಸ್ಪಷ್ಟವಾಗುತ್ತದೆ.

ಜಾತಿ ಹುಟ್ಟಿನಿಂದ ಬರುತ್ತದೆ ಹಾಗೂ ಸಂಕುಚಿತ ಮನೋಭಾವದಿಂದ ಕೂಡಿರುತ್ತದೆ. ಆದರೆ ಧರ್ಮವು ಆಚರಣೆಯಿಂದ ಬರುತ್ತದೆ ಹಾಗೂ ಎಲ್ಲರನ್ನು ಇಂಬಿಟ್ಟುಕೊಳ್ಳುವ ಉದಾತ್ತ ಚಿಂತನೆಯಿಂದ ಕೂಡಿರುತ್ತದೆ.

ವಚನ ಸಾಹಿತ್ಯವು ಲಿಂಗಾಯತ ಧರ್ಮಗ್ರಂಥವಾಗಿದೆ. ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ ನೋಡಿದಾಗ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಿಸಿದ್ದಾರೆ ಎಂದು ಸ್ಪಷ್ಟವಾಗುತ್ತದೆ.



**ಬಸವಣ್ಣನವರ ಸಮಕಾಲೀನ ಶರಣರ ವಚನಗಳಲ್ಲಿ ಬಸವಣ್ಣನವರ ಹಾಗೂ ಲಿಂಗಾಯತ ಧರ್ಮ ಕುರಿತ ಸಾಲುಗಳು ಹೀಗಿವೆ:**

ನಿಮ್ಮ ಧರ್ಮವಯ್ಯಾ, ಈ ಭಕ್ತಿಯ ಪಥವು, ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ. ನಿಮಗೂ ಎನಗೂ ಬಸವಣ್ಣನಧರ್ಮವಯ್ಯಾ
**– ಸಿದ್ಧರಾಮೇಶ್ವರರು**

ಗುರುಲಿಂಗಜಂಗಮಕ್ಕೆ ಆಧಾರ ಬಸವಣ್ಣ
**– ಅಂಬಿಗರಚೌಡಯ್ಯನವರು**

ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಬಸವಣ್ಣನಿಂದ, ಅತ್ತ ಬಲ್ಲಡೆ ನೀವು ಹೇಳಿರೆ, ಇತ್ತ ಬಲ್ಲಡೆ ನೀವು ಹೇಳಿರೆ
**– ಮಡಿವಾಳ ಮಾಚಿದೇವರು**

ಬಸವಣ್ಣನು ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರ
**– ಅಲ್ಲಮಪ್ರಭುದೇವರು**

ಅನುಭವ ಮಂಟಪವ ಮಾಡಿ. ಅರಿವ ಸಂಪಾದಿಸಿ ಆಚಾರವಂಗಗೊಳಿಸಿ ಏಳನೂರೆಪ್ಪತ್ತು ಅಮರಗಣಂಗಳ ಅನುಭವ ಮೂರ್ತಿಗಳ ಮಾಡಿ ಸ್ವಯಲಿಂಗಿಯಾದ ಬಸವಯ್ಯನು
**– ನೀಲಾಂಬಿಕೆ ತಾಯಿಯವರು**

ಎನ್ನ ಕಷ್ಟ ಕುಲದಲ್ಲಿ ಹುಟ್ಟಿದೆನೆಂಬ ಕರ್ಮವ ಕಳೆದು ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ ಬಸವಣ್ಣನು
**– ಡೋಹರ ಕಕ್ಕಯ್ಯನವರು**

ಬಸವಣ್ಣನೆ ಗುರುವೆಂದರಿಯದ ಅನಾಚಾರಿಗಳ ಎನಗೆ ತೋರದಿರಯ್ಯ ಗುಹೇಶ್ವರ
**– ಅಲ್ಲಮಪ್ರಭುದೇವರು**

ನಮಗೆ ಲಿಂಗವುಂಟು,ನಾವು ಲಿಂಗವಂತರೆಂದು ನುಡಿವರು
**– ಮಡಿವಾಳ ಮಾಚಿದೇವರು**

ಹೀಗೆ ವಚನಗಳಲ್ಲಿ ಬಸವಣ್ಣನವರಿಂದ ಲಿಂಗಾಯತ ಧರ್ಮ ಸ್ಥಾಪಿಸಲ್ಪಟ್ಟಿತು ಎಂದು ನಮಗೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಅದಲ್ಲದೆ ವಚನಗಳಲ್ಲಿ ಲಿಂಗವಂತ (ಲಿಂಗಾಯತ) ಪದವನ್ನು ೨೩ ವಚನಕಾರರು, ೧೦೬ ವಚನಗಳಲ್ಲಿ ೧೭೩ ಕಡೆ ಬಳಸಿದ್ದಾರೆ

೧೩ ನೇ ಶತಮಾನದಲ್ಲಿ ಹರಿಹರ ಕವಿಯು ಬಸವಣ್ಣನವರನ್ನು ಕಾರಣಿಕ ಪುರುಷ ಎಂದು ಬಣ್ಣಿಸಿದ್ದಾರೆ

"ಸಾಮರ್ಥ್ಯಮಂ ಬಿತ್ತಿ,
ಪ್ರತ್ಯಕ್ಷಂಗಳಂ ಬೆಳೆದು,
ಗಣಪರ್ವಂಗಳಂ ಸುಫಲಂ
ಮಾಡಲೆಂದು ಬಂದ ಕಾರಣಿಕ
ಬಸವಾ,
ನಿನ್ನ ದೆಸೆಯಿಂದೆಮ್ಮ ಭಕ್ತಿ
ಬಣ್ಣವೇರಿತು..."

೧೫ ನೇ ಶತಮಾನದಲ್ಲಿ ಭೀಮಕವಿಯು ಬಸವಣ್ಣನವರು 'ಮಹಾಗುರುವೆಮಗೆ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

"ಶ್ರೀ ಗುರುವೆ ದೀಕ್ಷಾಗುರುವೆ
ಶಿಕ್ಷಾ ಗುರುವೆ ರಕ್ಷಾ ಗುರುವೆ
ಸರ್ವಾಗಮೋಕ್ತಕಳಾಗುರುವೆ
ಶಿವಯೋಗ ಧರ್ಮಾರ್ಥ
ಭೋಗ ಗುರುವೇ ತ್ಯಾಗಗುರುವೆ
ಸುಧೀ ಗುರುವೇ ವಾಚಾಗುರುವೇ
ಭವರೋಗಹರ ಶರಣಾಗು ಬಸವ
ಮಹಾಗುರುವೆಮಗೆ"

ಜನಪದದಲ್ಲಿ ಕೂಡ ಬಸವಣ್ಣನವರು ಕೊಟ್ಟ ಹೊಸ ಧರ್ಮದ ಕಲ್ಪನೆ ಈ ರೀತಿ ವ್ಯಕ್ತವಾಗಿದೆ.

"ಬಸವ ಸಾರಿದನಂದು ಕುಶಲದಲಿ
ವಚನಗಳ
ಮಸುಕಿರುಳು ಹರಿದು ನಸುಕಾತು!
ಜಗದೊಳಗೆ
ಹೊಸಮತದ ಸೂರ್ಯನುದಿಸಿದನು"

ಹೀಗೆ ಶರಣರ ಸಂತತಿಯಲ್ಲಿ ಬಂದ ಎಲ್ಲಾ ಪ್ರಮುಖ ವ್ಯಕ್ತಿಗಳು ಬಸವಣ್ಣನವರು ಲಿಂಗಾಯತ ಧರ್ಮದ ಸ್ಥಾಪಕರು ಎಂದು ಸಾರಿ ಸಾರಿ ಹೇಳಿದ್ದಾರೆ.೧೮೯೧ ರ ಮೈಸೂರು ಪ್ರಾಂತ್ಯದ ಜನಗಣತಿಯಲ್ಲಿ ಲಿಂಗಾಯತ ಸಮಾಜದಲ್ಲಿ ೩೮ ಒಳಪಂಗಡಗಳನ್ನು ಗುರುತಿಸಲಾಗಿದೆ. ಅದರಲ್ಲಿ ವೀರಶೈವವು ಒಂದು ಉಪಪಂಗಡವಾಗಿತ್ತು ಎಂಬುದು ಗಮನಿಸಬೇಕಾದ ಅಂಶ.

೧೯೦೧ರಲ್ಲಿ ಲಿಂಗಾಯತ ಸಮಾಜದ ಕೆಲವು ವ್ಯಕ್ತಿಗಳು ತಾವು ಸ್ವತಂತ್ರ ಧರ್ಮ ಎಂದು ಪ್ರತಿಪಾದನೆ ಮಾಡುವ ಬದಲು ತಾವು ಲಿಂಗಿಬ್ರಾಹ್ಮಣರು ಎಂದು ಬ್ರಾಹ್ಮಣರ ಜೊತೆ ಸ್ಪರ್ಧೆಗಿಳಿಯುತ್ತಾರೆ. ಇದಕ್ಕೆ ಕಾರಣವೆನೆಂದರೆ ಲಿಂಗಾಯತರು ಹಾಗೂ ವೀರಶೈವರನ್ನು ತಲೆತಲಾಂತರದಿಂದ ಜನಗಣತಿಯಲ್ಲಿ ಶೂದ್ರರೆಂದು ಪರಿಗಣಿಸಲಾಗಿತ್ತು. ಇದನ್ನು ಹೋಗಲಾಡಿಸಲು ಹಾಗೂ ತಮಗೆ (ವೀರಶೈವರಿಗೆ) ಬ್ರಾಹ್ಮಣರಂತೆ ವೇದಾಧ್ಯಯನ, ಪೂಜೆ, ಪೌರೋಹಿತ್ಯಗಳ ಅಧಿಕಾರವಿದೆ ಎಂದು ಪ್ರತಿಪಾದಿಸಲು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿತ್ತು. ತಮ್ಮ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ಸ್ವತಂತ್ರ ಲಿಂಗಾಯತ ಧರ್ಮದ ಪ್ರತಿಪಾದನೆ ಕೈಬಿಟ್ಟರು.

ದಿವಾನ ಬಹದೂರ್ ಎಲ್ ಕೆ ಅನಂತಕ್ರಿಷ್ಣ ಅಯ್ಯರ್ ರವರ Mysore Tribes and Castes, Vol -1 ಪುಸ್ತಕದ ಪುಟ ೧೫೪ ರಲ್ಲಿ "ಕೆಲವು ಲಿಂಗಾಯತರು ತಮ್ಮನ್ನು ವೀರಶೈವರೆಂದು ಕರೆಯಬೇಕು ಎಂದು ೧೯೦೧ ರಲ್ಲಿ ಕೇಳಿದ್ದಾರೆ" ಎನ್ನುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಬೆಳವಣಿಗೆಗಳು ಲಿಂಗಾಯತ ಧರ್ಮವನ್ನು ಹಿಂದೂ (ವೈದಿಕ) ಧರ್ಮದ ಒಳಗೆ ಸೇರಿಸುವ ಪ್ರಯತ್ನವಾಗಿತ್ತು. ಆದರು ಸಾಕಷ್ಟು ಪ್ರಜ್ಞಾವಂತ ಲಿಂಗಾಯತರು ಇದು ಸ್ವತಂತ್ರ ಧರ್ಮ ಎಂದು ಪ್ರತಿಪಾದಿಸುತ್ತಲೆ ಬಂದಿದ್ದಾರೆ. ಅದಕ್ಕೆ ಸಂಬಂಧಪಟ್ಟ ವಿವರಗಳು ಇಲ್ಲಿವೆ

01

**೧೫-೧೨-೧೯೨೮** ರಲ್ಲಿ ಮೈಸೂರ್  ಸ್ಟಾರ್ ಪತ್ರಿಕೆಯಲ್ಲಿ ವಿದ್ವಾಂಸರಾದ ಜೇರಗೆ ಬಸವಲಿಂಗಪ್ಪನವರು ಲಿಂಗಾಯತ ಸ್ವತಂತ್ರ ಧರ್ಮವೆಂದು ಆಧಾರ ಸಹಿತ ಪ್ರತಿಪಾದಿಸಿದರು.

02

**೨೧-೧೨-೧೯೪೦**ರಂದು  ದಾವಣಗೆರೆಯಲ್ಲಿ ಸಭೆ ಸೇರಿದ್ದ "ವೀರಶೈವ ಮಹಾಸಭೆ ಸಂಸ್ಥೆ" ಯ ಕಮಿಟಿಯು ಸಮಗ್ರವಾಗಿ ಚರ್ಚಿಸಿ "ಲಿಂಗಾಯತರು ಹಿಂದೂಗಳಲ್ಲ" ಎಂಬ ನಿರ್ಣಯ ಸ್ವಿಕರಿಸಿದರು.

03

ಇದೇ ವರ್ಷದಲ್ಲಿ (೧೯೪೦) ತಮಿಳುನಾಡಿನ ಕುಂಭಕೋಣಂನಲ್ಲಿ ಸೇರಿದ್ದ ವೀರಶೈವ ಮಹಾಸಭೆಯ ವಾರ್ಷಿಕ ಸಮ್ಮೇಳನದಲ್ಲಿ ಲಿಂಗಾಯತ ಸ್ವತಂತ್ರ ಧರ್ಮವೆಂದು ಅಭ್ಯಸಿಸಿ ಸಮಿತಿ ರಚನೆ ಮಾಡಲಾಯಿತು. ಈ ಸಮಿತಿಯು **೧೯೪೦ ರಿಂದ ೧೯೪೫ರ** ವರೆಗೆ "ಹಿಂದೂ ಕಾಯದೆ ಮಸೂದೆ ಸಿದ್ಧಪಡಿಸುವ ಸಮಿತಿ" ಯೊಂದಿಗೆ ಪತ್ರ ವ್ಯವಹಾರ ನಡೆಸಿತು

04

**೧೯೪೨** ರಲ್ಲಿ ಪ್ರಸಿದ್ಧ ವಿದ್ವಾಂಸರಾಗಿದ್ದ ಶ್ರೀ ಎಂ ಆರ್ ಸಾಖರೆಯವರು ತಮ್ಮ "ಲಿಂಗಧಾರಣ ಚಂದ್ರಿಕೆ" ಗ್ರಂಥದಲ್ಲಿ ಲಿಂಗಾಯತವು ಸ್ವತಂತ್ರ ಧರ್ಮ ಎಂದು ಪ್ರತಿಪಾದಿಸಿದ್ದರು

05

ಬಸವತತ್ವ ಪ್ರಚಾರ ಮತ್ತು ಅನುಷ್ಠಾನ ಮಾಡುತ್ತಿದ್ದ ಕೆಲವು ಮಠಗಳಿದ್ದವು ಆದರೆ ಮನೆ ಮನೆಗೆ ಹೋಗಿ ಬಸವತತ್ವದ ಬಗ್ಗೆ ಜಾಗೃತಿ ಮೂಡಿಸಿದ ಕೀರ್ತಿ ಪೂಜ್ಯ ಲಿಂಗಾನಂದ ಸ್ವಾಮೀಜಿಯವರಿಗೆ ಸಲ್ಲುತ್ತದೆ.

ಲಿಂಗಾಯತ ಎನ್ನುವುದು ಒಂದು ಜಾತಿ, ಮತ ಅಥವಾ ಪಂಗಡವಲ್ಲ ಇದು ಸ್ವತಂತ್ರ ಧರ್ಮ ಎಂದು  ಪೂಜ್ಯ ಲಿಂಗಾನಂದ ಸ್ವಾಮೀಜಿಯವರು ಪ್ರತಿಪಾದಿಸಿದರು. ಧರ್ಮಕ್ಕೆ ಇರಬೇಕಾದ ಪ್ರಮುಖ ೧೧ ಲಕ್ಷಣಗಳು ಲಿಂಗಾಯತ ಧರ್ಮಕ್ಕಿವೆ ಎಂದು ಅವರ **'ಜಂಗಮ ದರ್ಶನ'** ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ.

06

ಲಿಂಗಾನಂದ ಸ್ವಾಮೀಜಿಯವರ ಪರಮಶಿಷ್ಯರಾದ ಪೂಜ್ಯ ಮಾತೆ ಮಹಾದೇವಿಯವರು ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಕೈಗೆತ್ತಿಕೊಂಡರು. ಸ್ವತಂತ್ರ ಧರ್ಮಕ್ಕೆ ಬೇಕಾದ ತಾತ್ವಿಕ ಚೌಕಟ್ಟನ್ನು ಇನ್ನೂ ಬದ್ರಗೊಳಿಸಿದರು.

**೧೯೯೬** ರಲ್ಲಿ ಪೂಜ್ಯ ಮಾತೆ ಮಹಾದೇವಿಯವರು ಬರೆದ "ಲಿಂಗಾಯತರು ವೀರಶೈವರಲ್ಲ" ಪುಸ್ತಕವು ದೊಡ್ಡ ಮಟ್ಟದ ಸಂಚಲನ ಮೂಡಿಸಿತು. ಸಾಕಷ್ಟು ಆಧಾರಗಳ ಮೂಲಕ ಲಿಂಗಾಯತರು ವೀರಶೈವರಲ್ಲ ಮತ್ತು ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವೆಂದು ಪ್ರತಿಪಾದಿಸಿದರು.

## 07

ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ಆಶಯದಂತೆ ಅವರು ಲಿಂಗೈಕ್ಯರಾದ ಮೇಲೆ **೧೯೯೭** ರಲ್ಲಿ ಪೂಜ್ಯ ಮಾತೆ ಮಹಾದೇವಿಯವರ ನೇತೃತ್ವದಲ್ಲಿ ದೆಹಲಿಯಲ್ಲಿ 'ಲಿಂಗಾಯತ ಧರ್ಮ ಸಮ್ಮೇಳನ' ಮಾಡಿ, ೨೦೦೧ ರ ಜನಗಣತಿಯಲ್ಲಿ 'ಲಿಂಗಾಯತ ಧರ್ಮ' ವೆಂದು ಬರೆಯಬೇಕೆಂದು ಜನಜಾಗೃತಿ ಮಾಡಲಾಯಿತು. ಇದು ೫ನೇ ಲಿಂಗಾಯತ ಧರ್ಮ ಸಮ್ಮೇಳನವಾಗಿತ್ತು.

ಸಮಾವೇಶದ ಮೂಲಕ ಮತ್ತು ಮನೆ ಮನೆಗೆ ಹೋಗಿ ಜನಸಾಮಾನ್ಯರಿಗೆ ಲಿಂಗಾಯತ ಧರ್ಮದ ಬಗ್ಗೆ ಜಾಗೃತಿ ಮೂಡಿಸಿ ಪುಸ್ತಕಕ್ಕೆ (ಕೆಲವೆ ವರ್ಗದವರಿಗೆ) ಸಿಮಿತವಾಗಿದ್ದ ಲಿಂಗಾಯತ ಸ್ವತಂತ್ರ ಧರ್ಮ ಹೋರಾಟವನ್ನು  ಜನಸಾಮಾನ್ಯರಿಗೆ ತಲುಪಿಸಿದ ಕೀರ್ತಿ ಪೂಜ್ಯ ಮಾತೆ ಮಹಾದೇವಿಯವರಿಗೆ ಸಲ್ಲುತ್ತದೆ.

ಜನಸಾಮಾನ್ಯರನ್ನು ಸಂಘಟಿಸುವಲ್ಲಿ ಪೂಜ್ಯ ಲಿಂಗಾನಂದ ಸ್ವಾಮೀಜಿ ಹಾಗೂ ಪೂಜ್ಯ ಮಾತೆ ಮಹಾದೇವಿಯವರ ಕಾರ್ಯ ಶ್ಲಾಘನೀಯ. ಸತತವಾಗಿ ನಾಡಿನಾದ್ಯಂತ ಸಂಚರಿಸಿ ಲಿಂಗಾಯತ ಧರ್ಮದ ಬಗ್ಗೆ ಅರಿವು ಮೂಡಿಸುವ ಕಾರ್ಯ ಜಾರಿಗೆ ತಂದರು.

## 08

**೧೯೯೮** ರಲ್ಲಿ ೬ನೇ ಲಿಂಗಾಯತ ಧರ್ಮ ಸಮ್ಮೇಳನವು ಮಹಾರಾಷ್ಟ್ರದ ಮುಂಬೈನಲ್ಲಿ ಹಾಗೂ **೧೯೯೯**ರಲ್ಲಿ ೭ನೇ ಲಿಂಗಾಯತ ಧರ್ಮ ಸಮ್ಮೇಳನವು ಮಹಾರಾಷ್ಟ್ರದ ಈಚಲಕರಂಜಿಯಲ್ಲಿ ಪೂಜ್ಯ ಮಾತೆ ಮಹಾದೇವಿಯವರ ನೇತೃತ್ವದಲ್ಲಿ ಜರುಗಿದವು.

## 09

೧೧-೨-೨೦೦೦ ರಂದು ಅಖಿಲ ಭಾರತ ವೀರಶೈವ ಮಹಾಸಭೆಯು "The Registrar General and Census Commissioner" ಅವರಿಗೆ ವಿವರವಾಗಿ ಪತ್ರ ಬರೆದು "ಲಿಂಗಾಯತವು ಸ್ವತಂತ್ರ ಧರ್ಮವಾಗಿದೆ" ಕಾರಣ ೨೦೦೧ರ ಜನಗಣತಿಯಲ್ಲಿ ಅದಕ್ಕೆ ಸ್ವತಂತ್ರ ಕೋಡ್ ಕೊಡಬೇಕೆಂದು ಕೋರಿಕೊಂಡಿತು.

## 10

ಕರ್ನಾಟಕ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾದ ಡಾ. ಎನ್. ಜಿ. ಮಹಾದೇವಪ್ಪನವರು ೨೦೦೪ ರಲ್ಲಿ **'ಲಿಂಗಾಯತರು ಹಿಂದೂಗಳಲ್ಲ'** ಎಂಬ ಪುಸ್ತಕ ರಚಿಸಿ, ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಿದರು. ಲಿಂಗಾಯತ ಧರ್ಮವನ್ನು ಅವೈದಿಕ ಧರ್ಮವೆಂದು ಪ್ರತಿಪಾದಿಸಲಾಗಿತ್ತು ಆದರೆ ಅದು ಹೇಗೆ ಅವೈದಿಕ ಧರ್ಮವೆಂದು ತಾತ್ವಿಕವಾಗಿ ಸಾಧರ ಪಡಿಸುವಲ್ಲಿ ಈ ಪುಸ್ತಕವು ಯಶಸ್ವಿಯಾಯಿತು. ಲಿಂಗಾಯತ ಧರ್ಮದ ತತ್ವಜ್ಞಾನದ ದೃಷ್ಟಿಯಿಂದ ಈ ಪುಸ್ತಕ ಅಮೂಲ್ಯ ಕೊಡುಗೆಯಾಗಿದೆ.

## 11

೨೦೦೫ರಲ್ಲಿ ಲನೇ ಲಿಂಗಾಯತ ಧರ್ಮ ಸಮ್ಮೇಳನವು ದೆಹಲಿಯ ಮಹಾವೀರ ವಾಟಿಕಾದಲ್ಲಿ, ೨೦೦೭ ರಲ್ಲಿ ೯ ನೇಯ ಲಿಂಗಾಯತ ಧರ್ಮ ಸಮ್ಮೇಳನವು ತಮಿಳುನಾಡಿನ ಚೆನ್ನೈನಲ್ಲಿ ಹಾಗೂ ೨೦೦೮ ರಲ್ಲಿ  ಪುನಃ ದೆಹಲಿಯಲ್ಲಿ ೧೦ ನೇ ಲಿಂಗಾಯತ ಧರ್ಮ ಸಮ್ಮೇಳನ ಪೂಜ್ಯ ಮಾತೆ ಮಹಾದೇವಿಯವರ ನೇತೃತ್ವದಲ್ಲಿ ಜರುಗಿತು.

## 12

೨೦೧೩ರಲ್ಲಿ ದೆಹಲಿಯ ಜಂತರ್ ಮಂತರ್ ನಲ್ಲಿ  ಭಾರಿ ಜನಸಮೂಹದ ಮೂಲಕ ಪೂಜ್ಯ ಮಾತೆ ಮಹಾದೇವಿಯವರು ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಗಾಗಿ ಹೋರಾಟ ಮಾಡಿದರು. ತದನಂತರ ಜನಜಾಗೃತಿ ಮೂಡಿಸಿಲು ಸಮಯ ಮೀಸಲಿಟ್ಟರು.

## 13

೧೪-೧೧-೨೦೧೭ ಮಹಾರಾಷ್ಟ್ರದ ಶರಣ ಮನ್ಮತಸ್ವಾಮಿಯವರ ಸ್ಥಳ ಬೀಡ್ ನಲ್ಲಿ ಮಹಾರಾಷ್ಟ್ರದ ಲಿಂಗಾಯತ ಸಮನ್ವಯ ಸಮಿತಿ ವತಿಯಿಂದ ಲಿಂಗಾಯತ ಧರ್ಮ ಸಮ್ಮೇಳನ ಜರುಗಿತು.

ಈ ಕಾರ್ಯಕ್ರಮದಲ್ಲಿ ರಾಷ್ಟ್ರಸಂತ ಡಾ. ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಪೂಜ್ಯ ಚೆನ್ನಬಸವಾನಂದ ಸ್ವಾಮೀಜಿ, ಪೂಜ್ಯ ಬಸವಲಿಂಗ ಪಟ್ಟದೇವ್ರು, ಪೂಜ್ಯ ಬಸವಜಯಮೃತ್ಯುಂಜಯ ಸ್ವಾಮೀಜಿ ಪಾಲ್ಗೊಂಡಿದ್ದರು. ಸಾವಿರಾರು ಜನ ನೆರೆದು ಈ ಸಮ್ಮೇಳನವು ಯಶಸ್ವಿಗೊಂಡಿತು.

## 14

೨೨-೧-೨೦೧೭ ರಂದು ಮಹಾರಾಷ್ಟ್ರದ ಲಿಂಗಾಯತ ಸಮನ್ವಯ ಸಮಿತಿ ವತಿಯಿಂದ ನಾಂದೇಡನಲ್ಲಿ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಗಾಗಿ ಪೂಜ್ಯ ಶಿವಲಿಂಗ ಶಿವಚಾರ್ಯ ಸ್ವಾಮೀಜಿ ಹಾಗೂ ಅವಿನಾಶ ಭೂಷಿಕರ್ ರವರ ನೇತೃತ್ವದಲ್ಲಿ ನೆರವೇರಿತು.

## 15

೨೦೧೭ರ ಜೂನ್ ತಿಂಗಳಿನಲ್ಲಿ ಪೂಜ್ಯ ಮಾತೆ ಮಹಾದೇವಿಯವರು ಹಾಗೂ ಇನ್ನಿತರ ಪೂಜ್ಯರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಲಿಂಗಾಯತ ಧರ್ಮ ಸಮನ್ವಯ ಸಮಿತಿ ಅಸ್ತಿತ್ವಕ್ಕೆ ಬಂತು. ಈ ಸಮಿತಿಯ ಅಡಿಯಲ್ಲಿ ಎಲ್ಲಾ ಬಸವ ಸಂಘಟನೆಗಳನ್ನು ಒಂದು ಗೂಡಿಸುವ ಕಾರ್ಯವನ್ನು ಪೂಜ್ಯ ಚೆನ್ನಬಸವಾನಂದ ಸ್ವಾಮೀಜಿಯವರು ವಹಿಸಿಕೊಂಡರು.

ಆಗ ಮಹಾರಾಷ್ಟ್ರದಲ್ಲಿ ರಾಷ್ಟ್ರಸಂತ ಎಂದೆ ಪ್ರಖ್ಯಾತರಾಗಿರುವ ಶತಾಯುಶಿ ಡಾ. ಶಿವಲಿಂಗ ಶಿವಾಚಾರ್ಯ ಸ್ವಾಮೀಜಿಗಳು, ಬಾಲ್ಕಿಯ ಬಸವಲಿಂಗ ಪಟ್ಟದೇವ್ರು, ಕೂಡಲಸಂಗಮದ ಬಸವಜಯಮೃತ್ಯುಂಜಯ ಸ್ವಾಮೀಜಿ, ಕೊರ್ಣೆಶ್ವರ ಸ್ವಾಮೀಜಿ, ಬೆಲ್ದಾಳ ಶರಣರು, ಅಕ್ಕ ಅನ್ನಪೂರ್ಣ ಹಾಗೂ ಸ್ಥಳಿಯ ಮುಖಂಡರು, ಶಾಸಕರು, ನ್ಯಾಯವಾದಿಗಳು ಹಾಗೂ ಇನ್ನೂ ಅನೇಕರು ಬೆಂಬಲ ವ್ಯಕ್ತಪಡಿಸಿದರು.

## 16

೧೯-೭-೨೦೧೭ ರಂದು ಬೀದರನಲ್ಲಿ ಲಿಂಗಾಯತ ಸಮನ್ವಯ ವತಿಯಿಂದ ಐತಿಹಾಸಿಕ ಲಿಂಗಾಯತ ಸ್ವತಂತ್ರ ಧರ್ಮ ರ್‍ಯಾಲಿ ನಡೆಯಿತು. ಈ  ಸಮಾವೇಶದಲ್ಲಿ ಲಕ್ಷಾಂತರ ಜನ ನೆರೆದು ಅತ್ಯಂತ ಯಶಸ್ವಿಗೊಳಿಸಿದರು. ಇದು ಲಿಂಗಾಯತ ಸ್ವತಂತ್ರ ಧರ್ಮ ಹೋರಾಟದ ಇತಿಹಾಸದಲ್ಲಿ ಅತಿ ದೊಡ್ಡ ತಿರುವು ಕೊಟ್ಟಿತು. ಅಂದು ಲಕ್ಷಾಂತರ ಜನ ಸೇರಿದ್ದನ್ನು ನೋಡಿ ಇಡಿ ರಾಜ್ಯದ ಜನತೆ ಬೆರಗಾಯಿತು. ಬಸವತತ್ವ ಪರಿಪಾಲಕ ಮಠಗಳ ಹಾಗೂ ರಾಜಕೀಯ ನಾಯಕರ ಗಮನ ಸೆಳೆಯಿತು.

ಈ ರ್‍ಯಾಲಿ ಜನಸಾಮಾನ್ಯರ ಹೋರಾಟದ ಸಾಕ್ಷಿಯಂತೆ ಕಂಡಿತು. ತಮ್ಮ ಅಸ್ಮಿತೆಗಾಗಿ, ಬಸವತತ್ವಕ್ಕಾಗಿ ಜನಸಾಮಾನ್ಯರು ನೆರೆದು ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು. ಈ ರ್‍ಯಾಲಿಗಾಗಿ ಅನೇಕರು ಹಗಲಿರುಳು ಶ್ರಮಿಸಿ ಯಶಸ್ವಿ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

## 17

ನಾಡಿನಲ್ಲಿ ಸಂಚಲನ ಮೂಡಿಸಿದ ಬೀದರ್ ರ್‍ಯಾಲಿಯಿಂದಾಗಿ ಪ್ರೇರಿತಗೊಂಡು ಬೆಳಗಾವಿ ನಾಗನೂರು ರುದ್ರಾಕ್ಷಿ ಮಠದ ಪೂಜ್ಯ ಸಿದ್ಧರಾಮ ಸ್ವಾಮೀಜಿಯವರು ೧೨-೮-೨೦೧೭ ರಂದು ಬೆಳಗಾವಿಯಲ್ಲಿ ಲಿಂಗಾಯತ ಧರ್ಮ ರ್‍ಯಾಲಿ ಯಶಸ್ವಿಯಾಗಿ ನೆರವೇರಿಸಿದರು. ಈ ರ್‍ಯಾಲಿಯಲ್ಲಿ ನಾಡಿನ ಪ್ರಮುಖ ಮಠಾಧಿಪತಿಗಳಾದ ಗದಗಿನ ಪೂಜ್ಯ ತೋಂಟದ ಸಿದ್ಧಲಿಂಗಶ್ರೀಗಳು, ನಿಜಗುಣಾನಂದ ಶ್ರೀಗಳು, ಚಿತ್ರದುರ್ಗದ ಮರುಘಾಶ್ರೀಗಳು, ಮೋಟಗಿಮಠ ಶ್ರೀಗಳು ಹಾಗೂ ಇನ್ನೂ ಅನೇಕ ಗಣ್ಯರು ಭಾಗವಹಿಸಿದರು. ಲಿಂಗಾಯತ ಧರ್ಮ ಆಸಕ್ತರಾದ ಶ್ರೀ ಎಂ ಬಿ ಪಾಟೀಲ್, ಶ್ರೀ ವಿನಯ ಕುಲಕರ್ಣಿ, ಶ್ರೀ ಬಸವರಾಜ ಹೊರಟ್ಟಿ, ಶ್ರೀ ಶಿವಾನಂದ ಜಾಮದಾರ ಮುಂತಾದವರು ಹೋರಾಟವನ್ನು ಸೇರಿ ಇನ್ನಷ್ಟೂ ಬಲಪಡಿಸಿದರು.

## 18

೩-೯-೨೦೧೭ ರಂದು ಮಹಾರಾಷ್ಟ್ರದ ಲಾತೂರಿನಲ್ಲಿ ಲಿಂಗಾಯತ ಸ್ವತಂತ್ರ ಧರ್ಮ ಕಹಳೆ ಮೊಳಗಿತು. ರಾಷ್ಟ್ರಸಂತ ಡಾ ಶಿವಲಿಂಗ ಶಿವಚಾರ್ಯ ಹಾಗೂ ಪೂಜ್ಯ ಬಸವಲಿಂಗ ಪಟ್ಟದೇವ್ರು ಸ್ವಾಮಿಗಳ ನೇತೃತ್ವದಲ್ಲಿ ಲಕ್ಷಾಂತರ ಜನ ನೆರೆದು ಇಡೀ ರಾಷ್ಟ್ರದ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಈ ರ್‍ಯಾಲಿಗಾಗಿ ಚೆನ್ನಬಸವಾನಂದ ಸ್ವಾಮೀಜಿ, ಕೊರಣೇಶ್ವರ ಸ್ವಾಮೀಜಿ, ಅವಿನಾಶ ಭೂಷಿಕರ್ ಹಾಗೂ ಮಹಾರಾಷ್ಟ್ರದ ಹಲವು ಪ್ರಮುಖರು ಶ್ರಮಿಸಿದ್ದಾರೆ.

## 19

೧೪-೯-೨೦೧೭ ರಂದು ಕಲಬುರ್ಗಿಯಲ್ಲಿ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ರ್‍ಯಾಲಿ ನಡೆಯಿತು. ಸುಲಫಲಶ್ರೀಗಳು ಹಾಗೂ ಇನ್ನಿತರರು ಸೇರಿ ಈ ರ್‍ಯಾಲಿ ಯಶಸ್ವಿಗೊಳಿಸಿದರು. ಕಲಬುರ್ಗಿಯ ಶರಣ ಬಸಪ್ಪ ಅಪ್ಪಾರವರು, ಪೂಜ್ಯ ಬೇಲಿಮಠದ ಸ್ವಾಮೀಜಿ, ರಂಜಾನ ದರ್ಗಾ, ನಟ ಚೇತನರವರು,ಶರಣಪ್ರಕಾಶ ಪಾಟೀಲ್, ಬಸವರಾಜ ರಾಯರೆಡ್ಡಿ ಹಾಗೂ ಹಿಂದೆ ಬೆಂಬಲಿಸಿದ ಎಲ್ಲಾ ಮಹನಿಯರು ಭಾಗವಹಿಸಿದ್ದರು. ಇದೇ ಸಮಯದಲ್ಲಿ 'ರಾಷ್ಟ್ರೀಯ ಬಸವ ಸೇನೆ ಸಂಘಟನೆ'ಗೆ ನಾಂದಿ ಹಾಡಲಾಯಿತು.

## 20

೧೮-೯-೨೦೧೭ ರಂದು ಚಿತ್ರದುರ್ಗದಲ್ಲಿ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಪೂಜ್ಯ ಮರುಘಾಶ್ರೀಗಳ ನೇತೃತ್ವದಲ್ಲಿ ಬೃಹತ್ ಸಮಾವೇಶ ನಡೆಯಿತು. ಈ ಮೂಲಕ ಕರ್ನಾಟಕದ ದಕ್ಷಿಣ ಭಾಗಕ್ಕೆ ಲಿಂಗಾಯತ ಧರ್ಮ ಹೋರಾಟ ಕಾಲಿಟ್ಟಿತು.

21

೫-೧೧-೨೦೧೭ ರಂದು ಹುಬ್ಬಳ್ಳಿಯಲ್ಲಿ ಶ್ರೀ ವಿನಯ ಕುಲಕರ್ಣಿ ಹಾಗೂ ಶ್ರೀ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಗಾಗಿ ಬೃಹತ್ ರ್‍ಯಾಲಿ ನಡೆಯಿತು.

22

೧೧-೧೧-೨೦೧೭ ರಂದು ಕೊಪ್ಪಳದಲ್ಲಿ ಜಿಲ್ಲಾ ಮಟ್ಟದ ರ್‍ಯಾಲಿ ನಡೆಯಿತು. ಹಿಂದೆ ಹೆಸರಿಸಿದ ಅನೇಕ ಪ್ರಮುಖರು ಭಾಗವಸಿದ್ದರು.

23

೧೯-೧೧-೨೦೧೭ ರಂದು ಲಿಂಗಾಯತ ಧರ್ಮ ಮಹಾಸಭಾದ ವತಿಯಿಂದ ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಲಿಂಗಾಯತ ಧರ್ಮ ಸಮಾವೇಶ ಹಾಗೂ ಲಿಂಗಾಯತ ಧರ್ಮ ಮಹಾಸಭಾದ ೨೨ ನೇ ವಾರ್ಷಿಕೋತ್ಸವ ನಡೆಯಿತು. ಈ ವಾರ್ಷಿಕೋತ್ಸವದಲ್ಲಿ ಪೂಜ್ಯ ಗಂಗಾಮಾತಾಜಿ, ಪೂಜ್ಯ ದಯಾನಂದ ಸ್ವಾಮೀಜಿ, ಪುಟ್ಟರುದ್ರಪ್ಪ, ಸಿ ಎಸ್ ದ್ವಾರಕನಾಥ, ಅರವಿಂದ ಮಾಲಗತ್ತಿ, ಯೋಗೇಶ ಮಾಸ್ಟರ್ ಹಾಗೂ ಅನೇಕ ಪ್ರಗತಿಪರ ಚಿಂತಕರು ಭಾಗಿಯಾಗಿದ್ದರು.

24

೩-೧೨-೨೦೧೭ ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಲಕ್ಷಾಂತರ ಜನ ಸೇರಿ ಸಮಾವೇಶ ಯಶಸ್ವಿಗೊಳಿಸಿದರು.

25

೧೦-೧೨-೨೦೧೭ ರಂದು ವಿಜಯಪುರದಲ್ಲಿ ಶ್ರೀ ಎಂ ಬಿ ಪಾಟೀಲರವರ ನೇತೃತ್ವದಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಇದೇ ರ್‍ಯಾಲಿ ಹಿಂದಿನ ದಿನ ಲಿಂಗಾಯತ ಧರ್ಮಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಎಂ ಬಿ ಪಾಟೀಲರು ಬಿಡುಗಡೆ ಮಾಡಿದರು.

26

೨೩-೧-೨೦೧೮ರಂದು 'ಜಾಗತಿಕ ಲಿಂಗಾಯತ ಮಹಾಸಭಾ' ಅಸ್ಥಿತ್ವಕ್ಕೆ ಬಂದಿತು. ಇದರ ರಾಷ್ಟ್ರೀಯ ಅಧ್ಯಕ್ಷರಾಗಿ ಬಸವರಾಜ ಹೊರಟ್ಟಿಯವರನ್ನು ಆಯ್ಕೆ ಮಾಡಲಾಯಿತು. ಇದೇ ವೇಳೆ ವೀರಶೈವ ಮಹಾಸಭಾದ ಪೋಷಕ ಅಧ್ಯಕ್ಷ ಸ್ಥಾನಕ್ಕೆ ಬಸವರಾಜ ಹೊರಟ್ಟಿಯವರು ರಾಜಿನಾಮೆ ನೀಡಿದರು. ಜೊತೆಗೆ ವಿವಿಧ ಜಿಲ್ಲೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ವೀರಶೈವ ಮಹಸಭಾದ 450ಕ್ಕೂ ಹೆಚ್ಚು ಜನ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದರು. ವೀರಶೈವ ಮಹಾಸಭಾ ಇಬ್ಬದಿ ನೀತಿಯನ್ನು ಖಂಡಿಸಿ ಅದರ ನಂಟು ಕಡಿದುಕೊಂಡರು.

27

೨೮-೧-೨೦೧೮ರಂದು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಬೃಹತ್ ರ್‍ಯಾಲಿ ನಡೆಯಿತು.

28

೫-೨-೨೦೧೮ ರಂದು ಹಾಸನ ಜಿಲ್ಲೆಯ ಅರಸಿಕೆರೆಯಲ್ಲಿ ಜಿಲ್ಲಾ ಮಟ್ಟದ ರ್‍ಯಾಲಿ ನಡೆಯಿತು

29

೯-೪-೨೦೧೮ ರಂದು ಮಹಾರಾಷ್ಟ್ರದ ಔರಂಗಾಬಾದನಲ್ಲಿ ಬೃಹತ್ ಲಿಂಗಾಯತ ಧರ್ಮ ರ್‍ಯಾಲಿ ನಡೆಯಿತು.

30

೧೯-೪-೨೦೧೮ ರಂದು ಮಹಾರಾಷ್ಟ್ರದ ನಾಸಿಕನಲ್ಲಿ ಜಿಲ್ಲಾ ಮಟ್ಟದ ಲಿಂಗಾಯತ ಧರ್ಮ ರ್‍ಯಾಲಿ ನಡೆಯಿತು.

31

೩-೬-೨೦೧೮ ರಂದು ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಕಿರಿಟೇಶ್ವರ ಮಠದ ಸಹಯೋಗದಿಂದ ಎಲ್ಲಾ ಲಿಂಗಾಯತ ಧರ್ಮ ಹೋರಾಟಗಾರ ನೇತೃತ್ವದಲ್ಲಿ ಬೃಹತ್ ಲಿಂಗಾಯತ ಧರ್ಮ ರ್‍ಯಾಲಿ ನಡೆಯಿತು.

## 32

ಈ ಎಲ್ಲಾ ರ್‍ಯಾಲಿಗಳ ಪ್ರಭಾವದಿಂದ ಕರ್ನಾಟಕ ರಾಜ್ಯ ಸರ್ಕಾರದ ಮೇಲೆ ತೀವ್ರ ಒತ್ತಡ ಉಂಟಾಯಿತು. ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಸಿದ್ಧರಾಮಯ್ಯನವರಿಗೆ ಲಿಂಗಾಯತ ಧರ್ಮವಾದಿ ಹಾಗೂ ವೀರಶೈವವಾದಿಗಳು ಸೇರಿ ೫ ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ೫ ಅರ್ಜಿಗಳನ್ನು ಸಿದ್ದರಾಮಯ್ಯನವರು ಹಿಂದುಳಿದ ವರ್ಗ ಆಯೋಗಕ್ಕೆ ಸಲ್ಲಿಸಿದರು. ಹಿಂದುಳಿದ ವರ್ಗ ಆಯೋಗವು ತಜ್ಞರ ಸಮಿತಿಯನ್ನು ರಚನೆ ಮಾಡಿತು.

## 33

**೧೯-೩-೨೦೧೮** ರಂದು ಕರ್ನಾಟಕ ಸರ್ಕಾರದ ಕ್ಯಾಬಿನೆಟ್ ಸಭೆಯಲ್ಲಿ ತಜ್ಞರ ಸಮಿತಿಯ ವರದಿಯಂತೆ ಒಕ್ಕೂರಲಿನಿಂದ 'ಲಿಂಗಾಯತ ಮತ್ತು ವೀರಶೈವ ಲಿಂಗಾಯತ (ಬಸವತತ್ವ ಒಪ್ಪುವ) ವವರಿಗೆ ಪ್ರತ್ಯೇಕ ಧರ್ಮ ಮಾನ್ಯತೆ ನೀಡಬೇಕೆಂದು ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳಲಾಯಿತು. ಈ ಕಾರ್ಯವು ಲಿಂಗಾಯತ ಸ್ವತಂತ್ರ ಧರ್ಮ ಹೋರಾಟದ ಮೈಲಿಗಲ್ಲಾಗಿದೆ. ಈ ಘನ ಕಾರ್ಯದಿಂದ ಮಾನ್ಯ ಸಿದ್ಧರಾಮಯ್ಯನವರ ಹೆಸರು ಲಿಂಗಾಯತ ಧರ್ಮ ಇತಿಹಾಸ ಪುಟದಲ್ಲಿ ಸೇರಿತು.

## 34

**೨೨-೩-೨೦೧೮** ರಂದು ಹಿಂದುಳಿದ ವರ್ಗ ಆಯೋಗದಿಂದ ಸೆಕ್ಷನ್ 2D ಮೈನಾರಿಟಿ ಕಮಿಷನ್ ಆಕ್ಟ ಮೂಲಕ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಗಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು.

## 35

ಲಿಂಗಾಯತ ಸ್ವತಂತ್ರ ಧರ್ಮ ಶಿಫಾರಸ್ಸನ್ನು ಕೇಂದ್ರ ಸರ್ಕಾರ ಅಂಗಿಕರಿಸಬೇಕೆಂದು ಒತ್ತಾಯಿಸಿ ಇದೇ **ಡಿಸೆಂಬರ್ ೧೦, ೧೧, ೧೨** ರಂದು ದೆಹಲಿಯಲ್ಲಿ ಬೃಹತ್ ಸಮಾವೇಶ ಹಾಗೂ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ.

ಲಿಂಗಾಯತ ಧರ್ಮ ಹೋರಾಟಕ್ಕೆ ಒಂದು ಶತಮಾನದ ಇತಿಹಾಸವಿದೆ. ಈ ಹೋರಾಟ ಯಾವುದೇ ಧರ್ಮದ ವಿರುದ್ಧ ಹೋರಾಟವಲ್ಲ. ಇದು ನಮ್ಮ ಅಸ್ಮಿತೆಯ ಹೋರಾಟ. ಬಸವತತ್ವ ಜಾರಿಗಾಗಿ ಹೋರಾಟ. ಜಾಗತಿಕ ಮಟ್ಟದ ಧರ್ಮಗಳ ಸಾಲಿಗೆ ಲಿಂಗಾಯತ ಧರ್ಮವನ್ನು ಸೇರಿಸಲು ನಡೆದಿರುವ ಹೋರಾಟ.




ಲಾತುರ, 2017




ಕಲಬುರಗಿ, 2017

ಹುಬ್ಬಳ್ಳಿ, 2017



# ಹೋರಾಟದ ಹಾದಿ...

## ಲಿಂಗಾಯತ "ಸ್ವತಂತ್ರ ಧರ್ಮ" ಹೋರಾಟದ ಇತಿಹಾಸ

### ಆಧಾರ ಗ್ರಂಥಗಳು

- ಲಿಂಗಾಯತರು ಹಿಂದೂಗಳಲ್ಲ ಮತ್ತು ಲಿಂಗಾಯತರು ವೀರಶೈವರಲ್ಲ
  ಪೂಜ್ಯ ಡಾ. ಮಾತೆ ಮಹಾದೇವಿ
- ಲಿಂಗಾಯತರು ಹಿಂದೂಗಳಲ್ಲ
  ಡಾ. ಎನ್. ಜಿ. ಮಹಾದೇವಪ್ಪ
- ಮಾರ್ಗ 7
  ಡಾ. ಎಮ್. ಎಮ್. ಕಲಬುರ್ಗಿ
- ಸಮಗ್ರ ವಚನ ಸಂಪುಟ
- ದಿನಪತ್ರಿಕೆಗಳು

ಸಂಗ್ರಹ: ಕಿರಣ ಬೆಲ್ಲದ, ಕೊಪ್ಪಳ 1/12/2018
Email: kiran.bellad@gmail.com
ಈ ಪುಸ್ತಕಕ್ಕೆ ಸ್ಪೂರ್ತಿ: ಲಿಂ. ರುದ್ರಪ್ಪ ಬೆಲ್ಲದ

### ಸೂಚನೆ

ಲಿಂಗಾಯತ ಸ್ವತಂತ್ರ ಧರ್ಮ ಹೋರಾಟಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನು ಕಲೆ ಹಾಕಲು ಪ್ರಯತ್ನಿಸಲಾಗಿದೆ. ಒಂದು ವೇಳೆ ಯಾವುದಾದರೂ ಮಾಹಿತಿ ಬಿಟ್ಟು ಹೋಗಿದ್ದರೆ ದಯಮಾಡಿ ನನ್ನ ಮೇಲ್ ಐಡಿಗೆ ಕಳುಹಿಸಿ.

\Lingayata Dharma

*designed by ravi belkeri*
*printed by manuprints, bengaluru*